# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ, ಅಂಕೋಲಾ.

ಸಿ. ಸಿ. ನಂಬರ 498/2025

| ಫಿರ್ಯಾದಿ | - ವಿರುದ್ಧ - | ಆರೋಪಿ |
|---|---|---|
| ಅಂಕೋಲಾ ಪೊಲೀಸ ಠಾಣೆ | | ಕೃಷ್ಣ ಸದಾಶಿವ ಸಿದ್ದಿ,<br>ವಯಸ್ಸುಃ 48,<br>ಸಾಃ ಹಳವಳ್ಳಿ, ಆದ್ರಳ್ಳಿ<br>ತಾಃ ಅಂಕೋಲಾ |

## ಆಪಾದನೆ

ದಿನಾಂಕಃ 30-12-2024 ರಂದು ಸಂಜೆ 7-00 ಗಂಟೆಗೆ ಅಂಕೋಲಾ ಪೊಲೀಸ ಠಾಣಾ ವ್ಯಾಪ್ತಿಯಲ್ಲಿ ಬರುವ ಅಂಕೋಲಾ ತಾಲೂಕಿನ ರಾಮನಗುಳಿ ಗ್ರಾಮದಲ್ಲಿ ಹಳವಳ್ಳಿ ಕಡೆಯಿಂದ ರಾಮನಗುಳಿ ಕಡೆಗೆ ಹಾಯ್ದಿರುವ ಸಿಮೆಂಟ್ ರಸ್ತೆಯಲ್ಲಿ ಆರೋಪಿಯಾದ ನೀವು ನಿಮ್ಮ ಹೊಂಡಾ ಶೈನ್ ಮೋಟಾರ ಸೈಕಲ್ ನಂ. ಕೆಎ-31/ಇಎಫ್ -8071 ನೇದರ ಹಿಂಬದಿಯಲ್ಲಿ ನಿಮ್ಮ ಹೆಂಡತಿ ಶ್ರೀಮತಿ ಸಂಗೀತಾ ಕೃಷ್ಣ ಸಿದ್ದಿ ಇವಳಿಗೆ ಕೂರಿಸಿಕೊಂಡು ನಿಮ್ಮ ಮೋಟಾರ ಸೈಕಲನ್ನು ಅತೀ ವೇಗ ಹಾಗೂ ನಿಷ್ಕಾಳಜಿತನದಿಂದ ಸವಾರಿ ಮಾಡಿಕೊಂಡು ಹೋಗಿ ರಾಮನಗುಳಿಯ ಸುಪರ್ ಮಾರ್ಕೆಟ್ ಹತ್ತಿರ ರಸ್ತೆಯಲ್ಲಿ ದನ ಅಡ್ಡ ಬಂದಿದ್ದನ್ನು ನೋಡಿ ನಿಮ್ಮ ಮೋಟಾರ ಸೈಕಲ್ಲಿನ ವೇಗವನ್ನು ನಿಯಂತ್ರಿಸಲಾಗದೆ, ಮೋಟಾರ ಸೈಕಲನ್ನು ರಸ್ತೆಯ ಮೇಲೆ ಬೀಳಿಸಿ ಅಪಘಾತಪಡಿಸಿರುತ್ತೀರಿ. ಆ ಮೂಲಕ ಕಲಂ. **281 ಬಿ.ಎನ್. ಎಸ್ -2023** ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಿ ಅಂತಾ ನಿಮ್ಮ ಮೇಲೆ ಆಪಾದನೆ ಇರುತ್ತದೆ.

ಎರಡನೇಯದಾಗಿ, ಮೇಲೆ ಹೇಳಿದ ದಿನ, ಸ್ಥಳ ಹಾಗೂ ಸಮಯದಲ್ಲಿ ನಿಮ್ಮ ಅತೀ ವೇಗ ಹಾಗೂ ನಿರ್ಲಕ್ಷತನದ ಚಾಲನೆಯಿಂದ ಹಿಂಬದಿ ಸವಾರಳಾದ ಶ್ರೀಮತಿ ಸಂಗೀತಾ ಕೃಷ್ಣ ಸಿದ್ದಿ ಇವರಿಗೆ ರಸ್ತೆಯ ಮೇಲೆ ಬೀಳಿಸಿ ಬಲಕೈ, ಬಲಕಾಲಿಗೆ ತೆರಚಿದ

ಗಾಯ ಹಾಗೂ ತಲೆಗೆ ಗಂಭೀರ ಗಾಯನೋವುಪಡಿಸಿ, ಅವರು ಮೂಗಿನಿಂದ ರಕ್ತ ಹೊರಬಂದು ರಾತ್ರಿ 9-20 ಗಂಟೆಗೆ ಸರ್ಕಾರಿ ಆಸ್ಪತ್ರೆಯಲ್ಲಿ ಮೃತಪಡಲು ಕಾರಣರಾಗಿರುತ್ತೀರಿ. ಆ ಮೂಲಕ **106 ಬಿ.ಎನ್. ಎಸ್ -2023** ರಡಿಯಲ್ಲಿ ನನ್ನ ಸಂಜ್ಞೆಯ ವ್ಯಾಪ್ತಿಯಲ್ಲಿ ಅಪರಾಧ ಮಾಡಿರುತ್ತೀರಿ ಅಂತಾ ನಿಮ್ಮ ಮೇಲೆ ಆಪಾದನೆ ಇರುತ್ತದೆ.

ಪ್ರಶ್ನೆಃ 1 ನಿಮಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾದ ಆಪಾದನೆ ಬಗ್ಗೆ ನಿಮಗೆ ಅರ್ಥವಾಯಿತೇ?

ಉತ್ತರಃ

ಪ್ರಶ್ನೆಃ 2 ಮೇಲ್ಕಂಡ ಅಪರಾಧಗಳಿಗೆ ಸಂಬಂಧಪಟ್ಟಂತೆ ತಪ್ಪು ಒಪ್ಪಿಕೊಳ್ಳುತ್ತೀರಿ ಅಥವಾ ವಿಚಾರಣೆ ಆಗಬೇಕು ಅಂತಾ ಬಯಸುತ್ತೀರಿ?

ಉತ್ತರಃ

( ಮೇಲಿನ ಆಪಾದನೆಯನ್ನು ಆರೋಪಿಗೆ ಬಹಿರಂಗ ನ್ಯಾಯಾಲಯದಲ್ಲಿ ಆತನಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿ ತಿಳಿಸಿ ಆತನು ಕೊಟ್ಟ ಉತ್ತರವನ್ನು ಬರೆದುಕೊಳ್ಳಲಾಗಿದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ)

Sd/-

ದಿನಾಂಕಃ 27-09-2025. ( ಅರ್ಪಿತಾ ಬಿ ಬೆಲ್ಲದ್ )

ಅಂಕೋಲಾ **ಪ್ರ ದ ನ್ಯಾದಂ, ಅಂಕೋಲಾ.**